1ನೇ ಹೆಚ್ಚುವರಿ ನ್ಯಾಯಾಧೀಶರು ಮತ್ತು **ಪ್ರಥಮ ದರ್ಜೆಯ ನ್ಯಾಯಿಕ**

**ದಂಡಾಧಿಕಾರಿಗಳವರ ನ್ಯಾಯಾಲಯ ಬೈಲಹೊಂಗಲ**

**ಸಿ.ಸಿ. ನಂ. 519/2020**

**ಚಾ.ಸಾ. - 8**
**ಪ್ರಾ.ಸಾ. - 7**

**ಸಾಕ್ಷಿದಾರರ ಹೆಸರು** : ಬಸವರಾಜು ಸಂಗಪ್ಪ ತಲ್ಲೂರ

**ಸಾಕ್ಷಿದಾರರ ವಯಸ್ಸು** : 63 ವರ್ಷ

**ಸಾಕ್ಷಿದಾರರ ಉದ್ಯೋಗ** : ಶೇತ್ಕಿ

**ಸಾಕ್ಷಿದಾರರ ವಿಳಾಸ** : ನಾಗನೂರು

---

**ಪ್ರಮಾಣ ವಚನ ಮಾಡಿದ ದಿನಾಂಕ : 20.12.2025.**

**ಮುಖ್ಯ ವಿಚಾರಣೆಃ ಎಪಿಪಿ ಅವರಿಂದಃ**

ಚಾಸಾ 1,4 ರಿಂದ 7 ರವರ ಪರಿಚಯ ಇರುವುದಿಲ್ಲ. ಆರೋಪಿತರ ನಮ್ಮ ಓಣಿಯವರು. ಈ ಕೇಸಿನ ಬಗ್ಗೆ ಏನು ಮಾಹಿತಿ ಇರುವುದಿಲ್ಲ. ನಾನು ಯಾವುದೇ ತಂಟೆ ಬಿಡಿಸಿರುವುದಿಲ್ಲ, ನಾನು ಪೋಲಿಸರಿಗೆ ಯಾವುದೇ ಹೇಳಿಕೆ ನೀಡಿರುವುದಿಲ್ಲ.

(ಸಾಕ್ಷಿಯು ಅಭಿಯೋಜನ ಕೇಸಿಗೆ ವಿರುದ್ದವಾಗಿ ಸಾಕ್ಷಿ ನುಡಿದಿರುವ ಕಾರಣ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಬೇಕೆಂದು ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರು ಕೋರಿಕೊಂಡಿರುವರು . ಕಡತವನ್ನು ಪರಿಶೀಲಿಸಲಾಯಿತು. ಸಾಕ್ಷಿಯು ಅಭಿಯೋಜನೆಗೆ ವಿರುದ್ದವಾಗಿ ಸಾಕ್ಷಿ ನುಡಿದಿರುವ ಕಾರಣ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅವಕಾಶ ನೀಡಲಾಯಿತು ).

ಪಾಟೀ **ಸವಾಲುಃ ಎಪಿಪಿ ಅವರಿಂದ ಃ**

ಚಾಸಾ 4 ರವರಿಗೆ 4 ಜನ ಮಕ್ಕಳು, ಚಾಸಾ 4 ರವರಿಗೆ 6 ಎಕರೆ 25 ಗುಂಟೆ ಜಮೀನು ಇರುತ್ತದೆ ಎಂದರೆ ಸರಿಯಲ್ಲ. ಚಾಸಾ 4 ರವರ ಮಗ ಶಿದ್ದರಾಮರವರ ಹೆಸರಿಗೆ ಜಮೀನನ್ನು ಮಾಡಿದ್ದರಿಂದ ಅವರ ಹೆಣ್ಣು ಮಕ್ಕಳು ತಹಶೀಲ್ದಾರ ಕಚೇರಿಯಲ್ಲಿ ಜಮೀನು ಸಲುವಾಗಿ ತಕರಾರು ಅರ್ಜಿ ಸಲ್ಲಿಸಿದ್ದು ನಿಮಗೆ ಗೊತ್ತಿರುತ್ತದೆ ಎಂದರೆ ಸಾಕ್ಷಿ ಗೊತ್ತಿಲ್ಲ ಎನ್ನುತ್ತಾರೆ. ದಿ. 14.01.2021 ರಂದು ರಾತ್ರಿ 08.30 ಗಂಟೆ ಸುಮಾರಿಗೆ ನೀವು ನಿಮ್ಮ ಮನೆಯ ಹತ್ತಿರ ಇದ್ದಾಗ ನಿಮ್ಮ ಮನೆಯ ಪಕ್ಕದಲ್ಲಿ ಯಾರೋ ಜೋರಾಗಿ ಬಾಯಿ ಮಾಡುವ ಶಬ್ದ ಕೇಳಲು ನೀವು ಅಲ್ಲಿಗೆ ಹೋಗಿ

ನೋಡಲು ಅಲ್ಲಿ ಚಾಸಾ 1,4,5,6 ಮತ್ತು 7ರವರು ಅವರ ಸಂಬಂದಿಕನಾದ ನಿಮ್ಮ ಊರ ಆರೋಪಿ 1 ರಿಂದ 3 ರವರೊಂದಿಗೆ ಬಾಯಿ ಜಗಳ ಮಾಡುತ್ತಾ ಬಡಿದಾಡುತ್ತಾ ಇದ್ದರು ಎಂದರೆ ಸರಿಯಲ್ಲ. ನೀವು ಹಾಗೂ ಚಾಸಾ 9 ರವರು ಜಗಳ ಬಿಡಿಸಿದಿರಿ ಎಂದರೆ ಸರಿಯಲ್ಲ. ಆಗ ಆರೋಪಿತರು ಚಾಸಾ 1,4,5,6 ಮತ್ತು 7ರವರಿಗೆ ನೀವು ಇವತ್ತು ಉಳಿದಿಕೊಂಡಿರಿ ಎಂದು ಜೀವ ಬೆದರಿಕೆ ಹಾಕಿ ತಮ್ಮ ಕೈಯಲ್ಲಿದ್ದ ಕೊಡಲಿ , ಕಾವು ಹಾಗೂ ಬಡಿಗೆಯನ್ನು ಅಲ್ಲಿಯೇ ಒಗೆದು ಹೋದರು ಎಂದರೆ ಸರಿಯಲ್ಲ. ಆಗ ಸಮಯ ರಾತ್ರಿ 08.30 ಆಗಿತ್ತು. ಚಾಸಾ 4 ರವರ ತಲೆಗೆ ಪೆಟ್ಟಾಗಿ ರಕ್ತ ಬರುತ್ತಾ ಇತ್ತು. ಚಾಸಾ 5 ರವರಿಗೆ ಬಲಗೈಗೆ ಒಳಪೆಟ್ಟಾಗಿತ್ತು . ಚಾಸಾ 1 ಮತ್ತು 6 ರವರಿಗೆ ಎಡಗೈಗೆ ಒಳ ಪೆಟ್ಟಾಗಿತ್ತು ಎಂದರೆ ಸರಿಯಲ್ಲ. ಅವರೆಲ್ಲರೂ ಸೇರಿಕೊಂಡು ಬೈಲಹೊಂಗಲ ತಾಲ್ಲುಕು ಆಸ್ಪತ್ರೆಗೆ ದಾಖಲಾಗಿ ಉಪಚಾರ ಪಡಿದಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿತರ ಮೇಲೆ ಚಾಸಾ 1 ರವರು ದೂರು ನೀಡಿರುತ್ತಾರೆ ಎಂದರೆ ಸರಿಯಲ್ಲ. ಈಗ ಓದಿ ಹೇಳಿದಂತೆ ದಿ. 13.01.2021 ರಂದು ಪೋಲಿಸರ ಮುಂದೆ ಹೇಳಿಕೆ ನೀಡಿರುತ್ತೀರಿ ಎಂದರೆ ಸರಿಯಲ್ಲ. ಹೇಳಿಕೆಯನ್ನು ನಿರಾಕರಿಸಿದ ಕಾರಣ ಅದನ್ನು ನಿಪಿ 5 ಎಂದು ಗುರುತಿಸಲಾಯಿತು. ನಿಪಿ 5 ರಂತೆ ಹೇಳಿಕೆ ನೀಡಿದ್ದರು ಸಹ ಸುಳ್ಳು ಹೇಳುತ್ತಾ ಇದ್ದೀರಿ ಎಂದರೆ ಸರಿಯಲ್ಲ. ಆರೋಪಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಾ ಇದ್ದೀರಿ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ ಇಲ್ಲ**

**ಮರುವಿಚಾರಣೆ ಃ ಇಲ್ಲ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ ಇದೆ.**

1ನೇ ಹೆಚ್ಚುವರಿ ಸಿವಿಲ್ ನ್ಯಾ.ಮತ್ತು ಜೆಎಂಎಫ್‌ಸಿ, ಬೈಲಹೊಂಗಲ